ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ

**ಸಿಸಿ ನಂ. 1719/2022**

| | | | |
|---|---|---|---|
| **ಹೆಸರು** | : | **ನಟರಾಜ** | **ಚಾ.ಸಾ.2** |
| **ತಂದೆಯ ಹೆಸರು** | : | **ಶಿವರಾಮ** | **ಪ್ರಾ.ಸಾ.2** |
| **ವಯಸ್ಸು** | : | **30 ವರ್ಷ** | **ದಿನಾಂಕಃ 28-02-2024** |
| **ಉದ್ಯೋಗ** | : | **ಉಪವಲಯ ಅರಣ್ಯಾಧಿಕಾರಿ** | |
| **ವಾಸಸ್ಥಳ** | : | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಪ್ರಾಸಾ-1, ಚಾಸಾ-3 ರಿಂದ 8 ರವರು ನನಗೆ ಗೊತ್ತು.

ದಿನಾಂಕ 17-11-2019 ರಂದು ಮಧ್ಯಾಹ್ನ 3.30 ಗಂಟೆ ಸುಮಾರಿಗೆ ಶೇಖರ ತಂದೆ ಗಂಗಣ್ಣರವರ ಜಿಂಕೆ ಮಾಂಸವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದಾನೆ ಎಂದು ಪ್ರಾಸಾ-1 ರವರಿಗೆ ಖಚಿತ ಮಾಹಿತಿ ಬಂದ ಮೇರೆಗೆ ನಾವು ಅರಣ್ಯ ಸಿಬ್ಬಂದಿಗಳು ಸದರಿ ವ್ಯಕ್ತಿಗೆ ಹಿಡಿಯಲು ಎರಡು ಗುಂಪುಗಳನ್ನು ಮಾಡಿ ಒಂದು ಗುಂಪಲ್ಲಿ ನಾನು, ಪ್ರಾಸಾ-1 ಮತ್ತು ಚಾಸಾ-3 ರವರು ಹಾಗೂ ಇನ್ನೊಂದು ಗುಂಪಿನಲ್ಲಿ ಚಾಸಾ-4 ರಿಂದ 6 ರವರು ಇರುತ್ತಾರೆ. ನನ್ನ ತಂಡ ಮಂಬಾಪುರ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದು ಹಾಗೂ ಇನ್ನೊಂದು ತಂಡ ಲಕ್ಷ್ಮಿಸಾಗರ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದು ನಮ್ಮ ತಂಡ ಗಸ್ತು ಮಾಡುತ್ತಿದ್ದ ಮ್ಯಾಕಲ್ ಬಂಡ ಎಂಬ ಸ್ಥಳದಲ್ಲಿ ಅಂದಾಜು 50 ಮೀಟರ ಅಂತರದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ನಮ್ಮ ಎದುರಿಗೆ ಬಂದಿರುತ್ತಾನೆ. ಆಗ ಅವನ ಹತ್ತಿರ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವಿದ್ದು ನಮಗೆ ನೋಡಿ ಗಾಭರಿಗೊಂಡು ತನ್ನ ಹತ್ತಿರವಿದ್ದ ಚೀಲವನ್ನು ಅಲ್ಲೆ ಬಿಸಾಕಿ ಓಡಿ ಹೋಗಿರುತ್ತಾನೆ. ಪ್ರಾಸಾ-1 ರವರು ಸದರಿ ಆರೋಪಿಗೆ ಹಿಡಿಯಲು ಬೆನ್ನಟ್ಟಿದಾಗ ಅವನು ನಮಗೆ ಸಿಕ್ಕಿರುವುದಿಲ್ಲ.

ನಂತರ ನಾವು ಲಕ್ಷ್ಮಿಸಾಗರದಲ್ಲಿರುವ ಇನ್ನೋಂದು ತಂಡದವರಿಗೆ ಕರೆ ಮಾಡಿ ನಮ್ಮ ಹತ್ತಿರ ಕರೆಸಿ ಸದರಿ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಚಿಪ್ಪು ಇರುವ ಸುತ್ತಿದ ಒಂದು ಪ್ರಾಣಿ ದೊರೆತಿರುತ್ತದೆ. ಸದರಿ ಪ್ರಾಣಿ ನನ್ನ ಸೇವ ಅನುಭವದಿಂದ ಚಿಪ್ಪು ಹಂದಿ ಅಥವಾ Pangolin ಎಂದು ನಾನು ಗುರುತಿಸಿರುತ್ತೇನೆ. ಈಗ ನೋಡುತ್ತಿರುವ ನಿಪಿ-1 ರ ಭಾವಚಿತ್ರದಲ್ಲಿವ ಪ್ರಾಣಿ ಆ ದಿನ ನಮಗೆ

ಸದರಿ ಚೀಲದಲ್ಲಿ ಸಿಕ್ಕಿರುತ್ತದೆ.

ಆರೋಪಿ ಸದರಿ ಪ್ರಾಣಿಯನ್ನು ಸಾಗಾಣಿ ಮಾಡುತ್ತಿದ್ದ ಕಾರಣ ಅವನ ವಿರುದ್ದ ಪ್ರ.ವ.ವ.ಯನ್ನು ದಾಖಲಿಸಲು ಮುಂದಾಗಿರುತ್ತೇವೆ. ನಂತರ ಪ್ರ.ವ.ವ.ಯನ್ನು ದಾಖಲಿಸಿರುತ್ತೇವೆ. ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಲು ಮುಂದಾಗಿದ್ದು ಯಾವದೇ ಸಾರ್ವಜನಿಕರು ಸಿಕ್ಕಿರುವುದಿಲ್ಲ ಆದ್ದರಿಂದ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಪ್ರಾಸಾ-1 ರವರು ಪಂಚನಾಮೆಯನ್ನು ಮಾಡಿರುತ್ತಾರೆ. ಈಗ ನೋಡುತ್ತಿರುವ ನಿಪಿ-3 ರ ಪಂಚನಾಮೆ ಆ ದಿನ ಪ್ರಾಸಾ-1 ರವರ ಮಾಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ನನ್ನ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ನನ್ನ ಸಮಕ್ಷಮ ಸದರಿ ಪ್ರಾಣಿಯನ್ನು ಹಾಗೂ ಒಂದು ಕೋಲನ್ನು ಜಪ್ತಿ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಯಂಕಾಲ 4.15 ರಿಂದ 5.30 ಗಂಟೆ ವರೆಗೆ ಜರುಗಿಸಲಾಯಿತು.

ಆರೋಪಿ ಇಂತಹ ಕೃತ್ಯಗಳಲ್ಲಿ ಕೈವಾಡ ಇದ್ದ ಕಾರಣ ಆರೋಪಿಯನ್ನು ನಾವು ಗುರುತಿಸಿರುತ್ತೇವೆ. ನಂತರ ಮುಂದಿನ ತನಿಖೆ ತನಿಖಾಧಿಕಾರಿಗಳು ಮಾಡಿರುತ್ತಾರೆ. ಈಗ ನೋಡುತ್ತಿರುವ ನಿಪಿ-8 ಮತ್ತು 9 ರ ಭಾವಚಿತ್ರಗಳಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರಗಳನ್ನು ನಮ್ಮ ವಲಯ ಕಛೇರಿಯಲ್ಲಿ ಪಡೆಯಲಾಗಿತ್ತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**